ನಾಗರಹೊಳೆಗೆ ಅಕ್ರಮ ಪ್ರವೇಶ ಕಾರಣ ವರದಿಗಾರರನ್ನು ಬಂಧಿಸುವುದು

963 (1049) - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗರಹೊಳೆ ಅಭಯಾರಣ್ಯ ಪ್ರದೇಶ ವ್ಯಾಪ್ತಿಯೊಳಗೆ ಅಕ್ರಮವಾಗಿ ಎಷ್ಟು ಜನರು ನುಸುಳಿರುವ ಬಗ್ಗೆ ಈ ಸಾಲಿನಲ್ಲಿ ದಾಖಲಾಗಿರುವ ಪ್ರಕರಣಗಳೆಷ್ಟು?

ಆ. ಈ ಪ್ರಕರಣಗಳನ್ನು ಯಾವ ಕಾಯ್ದೆ ಉಲ್ಲಂಘನೆಯಡಿ ಎಷ್ಟು ಜನರನ್ನು ಬಂಧಿಸಲಾಗಿದೆ?

ಇ. ಬಂಧಿಸಲಾಗಿರುವ ಇವರುಗಳಿಗೆ ಯಾವ ಶಿಕ್ಷೆ ವಿಧಿಸಲಾಗಿದೆ?

ಈ. ಇತ್ತೀಚಿಗೆ ಪತ್ರಕರ್ತರನ್ನು ಬಂಧಿಸಿರುವುದು ನಿಜವೇ?

ಉ. ಸಚಿವರೊಬ್ಬರು ವಿಶ್ರಾಂತಿ ಪಡೆಯಲು (ವನ್ಯಪ್ರಾಣಿ ಛಾಯಾಗ್ರಹಣಕ್ಕೆ) ಹೋಗಿದ್ದು ಅವರ ಸಂದರ್ಶನಕ್ಕೆ ಪತ್ರಕರ್ತರು ತೆರಳಿದರು ಎಂಬ ವರದಿ ಬಗ್ಗೆ ಸರ್ಕಾರದ ಉತ್ತರವೇನು?

ಊ. ಅರಣ್ಯ ಕಾಯ್ದೆಯಡಿ ಸಚಿವರ ಕ್ರಮ ಸಮಂಜಸವೇ?

ಶ್ರೀ ಕೆ. ಎಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ. 2002-03ನೇ ಸಾಲಿನಲ್ಲಿ ನಾಗರಹೊಳೆ ಅಭಯಾರಣ್ಯ ಪ್ರದೇಶ ವ್ಯಾಪ್ತಿಯೊಳಗೆ ಅಕ್ರಮವಾಗಿ ಪ್ರರೇಶ ಮಾಡಿದ ಸಂಬಂಧ 24 ಪ್ರಕರಣಗಳು ದಾಖಲಾಗಿದೆ.

ಆ. 1972ರ ವನ್ಯಜೀವಿ ರಕ್ಷಣಾ ಕಾಯ್ದೆ (ತಿದ್ದುಪಡಿ 1991)ರ ಸೆಕ್ಷನ್ 2,9,27,29,30,35(6),35(8),50 ಹಾಗೂ 51 ರ ಅಡಿಯಲ್ಲಿ ಕ್ರಮ ಜರುಗಿಸಿ 43 ಜನರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದೆ.

ಇ. 1. ಮೂರು ಪ್ರಕರಣಗಳಲ್ಲಿ ಆರೋಪಿಗಳು ತಮ್ಮ ತಪ್ಪನ್ನು ಒಪ್ಪಿಕೊಂಡು ರಾಜದಂಡ (ಕಾಂಪೌಂಡಿಂಗ್ ಫೀ) ಕಟ್ಟಿ ಮುಂದಕ್ಕೆ ಇಂತಹ ತಪ್ಪು ಮಾಡೋದಿಲ್ಲವೆಂದು ಮುಚ್ಚಳಿಕೆ ನೀಡಿದ್ದರಿಂದ ಹಾಗೂ ಅವುಗಳು ವನ್ಯಜೀವಿ ಸಂರಕ್ಷಣಾ ಕಾಯಿದೆ ಸೆಕ್ಷನ್ 54ರ ಪ್ರಕಾರ ರಾಜೀ ತೀರ್ಮಾನ ಮಾಡುವಂತಹ ಪ್ರಕರಣಗಳಾಗಿದ್ದರಿಂದ ರಾಜೀ ತೀರ್ಮಾನದ ಮೂಲಕ ಮುಕ್ತಾಯ ಮಾಡಲಾಗಿದೆ.

2. ಒಂದು ಪ್ರಕರಣದಲ್ಲಿ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ.

ಈ. ಹೌದು.

ಉ. ಸಚಿವರೊಬ್ಬರು ವಿಶ್ರಾಂತಿಗೋಸ್ಕರ ವಿಶ್ರಾಂತಿ ಗೃಹವನ್ನು ಮುಂಚಿತವಾಗಿ ಕಾಯ್ದಿರಿಸಿಕೊಂಡು ಎಲ್ಲಾ ಸಾರ್ವಜನಿಕರಂತೆ ಹೋಗಿದ್ದರು. ಪತ್ರಕರ್ತರು ರಾಷ್ಟ್ರೀಯ ಉದ್ಯಾನವನವನ್ನು ಅನುಮತಿ ಇಲ್ಲದೇ ಪ್ರವೇಶಿಸಿದ್ದರು.

ಊ. ಹೌದು.

ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ

964 (1050) - ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ (ಅಂಕೋಲ) : ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?